ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ	**386(17)**
ಸದಸ್ಯರ ಹೆಸರು	**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)**
ವಿಷಯ	**ಕೋವಿಡ್-19 ರಿಂದ ಮೃತರಾದ ಬಿ.ಪಿ.ಎಲ್ ಕುಟುಂಬಗಳಿಗೆ ನೀಡುವ ಪರಿಹಾರದ ಕುರಿತು**
ಉತ್ತರಿಸಬೇಕಾದ ದಿನಾಂಕ	**15/09/2021**
ಉತ್ತರಿಸುವ ಸಚಿವರು	**ಕಂದಾಯ ಸಚಿವರು**
ಪ್ರಶ್ನೆ	**ಉತ್ತರ**
ಅ) ಕೋವಿಡ್-19 ರಿಂದ ಮೃತರಾದ ಬಡತನ ರೇಖೆಗಿಂತ ಕೆಳಗಿರುವವರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದ್ದು, ಎಷ್ಟು ಅರ್ಜಿಗಳು ಸ್ವೀಕೃತವಾಗಿವೆ; ಎಷ್ಟು ಜನರಿಗೆ ಪರಿಹಾರವನ್ನು ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು);	➢ ಕೋವಿಡ್ ನಿಂದ ಮೃತ ಹೊಂದಿದ ಬಿ.ಪಿ.ಎಲ್ ಕುಟುಂಬದ ದುಡಿಯುವ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ವಿತರಣೆಗೆ ಕುರಿತಂತೆ ರಾಜ್ಯದಲ್ಲಿ ಒಟ್ಟು 7711 ಅರ್ಜಿಗಳು ಸ್ವೀಕೃತವಾಗಿದೆ. ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ. ➢ ಪರಿಹಾರ ಕೋರಿಕೆ ಅರ್ಜಿಗಳ ಕ್ಷೇತ್ರ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ವರದಿ ಆಧಾರದ ಮೇಲೆ ಪರಿಹಾರ ವಿತರಿಸಲಾಗುವುದು.
ಆ) ಪರಿಹಾರ ನೀಡುವುದಕ್ಕಾಗಿ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು?	ಕೋವಿಡ್-19 ಮೃತ ವ್ಯಕ್ತಿಯ ಬಿ.ಪಿ.ಎಲ್ ಕುಟುಂಬಕ್ಕೆ ಪರಿಹಾರ ನೀಡಲು ಮಾನದಂಡಗಳು ಈ ಕೆಳಕಂಡಂತಿದೆ. ➢ ವ್ಯಕ್ತಿಯು ಕೋವಿಡ್ ನಿಂದ ಮೃತಪಟ್ಟಿರಬೇಕು. ➢ ಮೃತ ವ್ಯಕ್ತಿಯು ಬಿ.ಪಿ.ಎಲ್ ಕುಟುಂಬಕ್ಕೆ ಸೇರಿರಬೇಕು. ➢ ಮೃತ ವ್ಯಕ್ತಿಯು ಬಿ.ಪಿ.ಎಲ್ ಕುಟುಂಬದ ದುಡಿಯುವ ಸದಸ್ಯನಾಗಿರಬೇಕು. ➢ ಕುಟುಂಬದ ಕಾನೂನುಬದ್ಧ ವಾರಸುದಾರನಿಗೆ ಪರಿಹಾರ ನೀಡಲಾಗುವುದು.

ಸಂ. DSSP- LCQ-16/2021

(ಆರ್.ಅಶೋಕ)
ಕಂದಾಯ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) ಇವರ ಪ್ರ.ಸಂ.386(17)ಕ್ಕೆ ಅನುಬಂಧ

ಕ್ರ.ಸಂ	ಜಿಲ್ಲೆ	ಸ್ವೀಕೃತವಾದ ಅರ್ಜಿಗಳ ಸಂಖ್ಯೆ
1	ಬಾಗಲಕೋಟೆ	38
2	ಬಳ್ಳಾರಿ	254
3	ಬೆಂಗಳೂರು	950
4	ಬೆಳಗಾವಿ	84
5	ಬೆಂಗಳೂರು ನಗರ	445
6	ಬೀದರ್	212
7	ಚಾಮರಾಜನಗರ	235
8	ಚಿಕ್ಕಬಳ್ಳಾಪುರ	85
9	ಚಿಕ್ಕಮಗಳೂರು	18
10	ಚಿತ್ರದುರ್ಗ	181
11	ದಕ್ಷಿಣ ಕನ್ನಡ	137
12	ದಾವಣಗೆರೆ	240
13	ಧಾರವಾಡ	434
14	ಗದಗ	192
15	ಹಾಸನ	443
16	ಹಾವೇರಿ	196
17	ಕಲ್ಬುರ್ಗಿ	67
18	ಕೊಡಗು	160
19	ಕೋಲಾರ	396
20	ಕೊಪ್ಪಳ	633
21	ಮಂಡ್ಯ	399
22	ಮೈಸೂರು	783
23	ರಾಯಚೂರು	91
24	ರಾಮನಗರ	267
25	ಶಿವಮೊಗ್ಗ	146
26	ತುಮಕೂರು	317
27	ಉಡುಪಿ	20
28	ಉತ್ತರಕನ್ನಡ	155
29	ವಿಜಯಪುರ	73
30	ಯಾದಗಿರಿ	60
ಒಟ್ಟು		**7711**